ದಿ:,12.09.2022 OS.No.106 /2015 PW-1

ದಿ:12.09.2022 ರಂದು ಸಾಕ್ಷಿಯನ್ನು ಕರೆಸಲಾಯಿತು ಪ್ರಮಾಣ ವಚನ ಬೋಧಿಸಲಾಯಿತು.

ಪಾಟೀ ಸವಾಲು ಶ್ರೀ. ಎ ಬಿ ಕೆ ವಕೀಲರಿಂದಃ

ನಾನು ಎಂಟನೇ ತರಗತಿಯ ವರೆಗೆ ವಿಧ್ಯಾಭ್ಯಾಸ ಮಾಡಿದ್ದೇನೆ. ನಮ್ಮ ಯಜಮಾನರು ನಾಲ್ಕನೇ ತರಗತಿವರಗೆ ವಿಧ್ಯಾಭ್ಯಾಸ ಮಾಡಿದ್ದಾರೆ. ನಮ್ಮ ಮದುವೆ *2011* ರಲ್ಲಿ ಮದ್ದೂರಮ್ಮ ದೇವಸ್ಥಾನದಲ್ಲಿ ಆಗಿರುತ್ತದೆ. ವಾದಿಯವರ ಹೆಸರಿನಲ್ಲಿ ಸರ್ಕಾರದಿಂದ ಮತದಾರರ ಗುರುತಿನ ಚೀಟಿ, ಆಧಾರ್ ಕಾರ್ಡ್ ಮತ್ತು ಪಡಿತರ ಚೀಟಿ ನೊಂದಣಿ ಆಗಿರುತ್ತದೆ. ವಾದಿಯ ಮತದಾರರ ಚೀಟಿ ನನ್ನ ಮದುವೆಗೂ ಮುನ್ನಾ ಆಗಿರುತ್ತದೆ. ಮದುವೆಗೂ ಮೊದಲು ವಾದಿ ಎಲ್ಲಿ ಮತದಾನ ಮಾಡುತ್ತಿದ್ದರು ಎಂದು ನನಗೆ ಗೊತ್ತಿಲ್ಲ ನನ್ನ ಮದುವೆಯಾದ ನಂತರ ತಟ್ಟೆಕೆರೆ ವಿನಾಯಕ ನಗರದಲ್ಲಿ ಮತದಾನ ಮಾಡುತ್ತಿದ್ದರು. ತಟ್ಟೆಕೆರೆ ವಿನಾಯಕ ನಗರದಲ್ಲಿ ಮತದಾನ ಚೀಟಿಯನ್ನು ಯಾವ ವರ್ಷ ಮಾಡಿಸಿದರು ಎಂದು ನನಗೆ ಗೊತ್ತಿಲ್ಲ. ನನಗೆ ವಾದಿಯ ಮತದಾರ ಗುರುತಿನ ಚೀಟಿ ಎಲ್ಲಿ ಇತ್ತು ಎಂದು ನನಗೆ ಗೊತ್ತಿಲ್ಲ. ವಾದಿ ಸಲ್ಲಿಸಿರುವ ದಾವೆಗೆ ಪ್ರತಿವಾದಿ ಏನು ತಕರಾರು ಸಲ್ಲಿಸಿದ್ದಾರೆ ಎಂದು ನಾನು ತಿಳಿದುಕೊಂಡಿದ್ದೇನೆ. ಪ್ರತಿವಾದಿ ತನ್ನ ತಕರಾರು ಪತ್ರದಲ್ಲಿ ವಾದಿ ಸರಸಮ್ಮ ಮತ್ತ ನಾಗಣ್ಣನವರ ಮಗ ಅದರೆ ಪುಟ್ಟಸ್ವಾಮಿ ಮತ್ತು ಜಯಲಕ್ಷಮ್ಮರವರ ಮಗ ಅಲ್ಲ ಎಂದು ನಮೂದು ಮಾಡಿರುತ್ತಾರೆ ಆದರೆ ಅದು ಸುಳ್ಳು ಎಂದು ನುಡಿಯುತ್ತಾರೆ. ವಾದಿಯ ಜನ್ಮ ದಿನಾಂಕ *05.03.1985* ಆಗಿರುತ್ತದೆ. *05.03.1985* ಜನ್ಮ ದಿನಾಂಕದ ಆಧಾರ ಮೇಲೆ ಸರ್ಕಾರದ ಯಾವ ಯಾವ ದಾಖಲಾತಿಗಳನ್ನು ವಾದಿ ಪಡೆದುಕೊಂಡಿದ್ದಾರೆ ಎಂದರೆ ಪ್ಯಾನ್, ಆದಾರ್ ಕಾರ್ಡ್ ಮತ್ತು ಮತದಾರರ ಚೀಟಿ ಪಡೆದುಕೊಂಡಿದ್ದಾರೆ. ವಾದಿ ಗಾರೆ ಕೆಲಸ ಮಾಡುತ್ತಿದ್ದರು. ವಾದಿ ಈಗ ಅನಾರೋಗ್ಯದ ಕಾರಣ ಎಲ್ಲಿಯು ಕೆಲಸ

ಮಾಡುತ್ತಿಲ್ಲ ಎಂದು ನುಡಿಯುತ್ತಾರೆ. ಈಗ ವಾದಿ ಯಾವುದೇ ಕೆಲಸ ಮಾಡುತ್ತಿಲ್ಲ ಮನೆಯಲ್ಲಿಯೇ ಇದ್ದಾರೆ. ವಾದಿ ನ್ಯಾಯಾಲಯಕ್ಕೆ ಬಂದು ಸಾಕ್ಷಿ ನುಡಿಯಬಹುದಲ್ಲವೇ ಎಂದರೆ ಅವರಿಗೆ ಅನಾರೋಗ್ಯದ ಕಾರಣ ನಾನು ಬಂದು ಸಾಕ್ಷ್ಯ ನುಡಿಯುತ್ತಿದ್ದೇನೆ. ವಾದಿ ಸಹಿ ಮಾಡುತ್ತಾರೆ. ವಾದಿ ಈ ನ್ಯಾಯಾಲಯದಲ್ಲಿ ಸಾಕ್ಷ್ಯ ನುಡಿದಿದ್ದರೆ ಎಂದರೆ ಸಿ ಸಿ *665/2015* ರಲ್ಲಿ ಅವರ ಆರ್ಯೋ ಚೆನ್ನಾಗಿದ್ದ ಸಮಯದಲ್ಲಿ ಸಾಕ್ಷ್ಯ ನುಡಿದಿದ್ದಾರೆ. ಸಿ ಸಿ *665/2015* ರಲ್ಲಿ ಸಾಕ್ಷ್ಯ ನುಡಿದ ನಂತರ ಅವರಿಗೆ ಆರೋಗ್ಯ ಹದಗೆಟ್ಟಿರುತ್ತದೆ. ಸದರಿ ಪ್ರಕರಣದಲ್ಲಿ ಸುಮಾರು *3-4* ವರ್ಷಗಳ ಹಿಂದೆ ಸಾಕ್ಷ್ಯ ನುಡಿದಿರುತ್ತಾರೆ. ನಿಪಿ-*1* ನ್ನು ದಿ.*11.09.2017* ರಂದು ನೀಡಿರುತ್ತಾರೆ. ನಿಪಿ-*1* ನ್ನು ಹಾಜರುಪಡಿಸುವ ಸಂದರ್ಭದಲ್ಲಿ ವಾದಿಗೆ ಆರೋಗ್ಯ ಸರಿ ಇಲ್ಲ ಎಂದು ವೈದ್ಯಕೀಯ ಪ್ರಮಾಣ ಪತ್ರವನ್ನು ಹಾಜರುಪಡಿಸಿದ್ದೀರಾ ಎಂದರೆ ಹೌದು ಎಂದು ನುಡಿಯುತ್ತಾರೆ. ನಿಪಿ-*1* ನ್ನು ನೀಡಿದ ನಂತರ ಸಿ ಸಿ *665/2015* ರಲ್ಲಿ ನ್ಯಾಯಾಲಯದಿಂದ ವಾದಿ ಬಂದು ಸಾಕ್ಷ್ಯ ನುಡಿಯಲೇ ಬೇಕು ಎಂದು ವಾರೆಂಟ್ ಬಂದ ಕಾರಣ ಬಂದು ಸಾಕ್ಷ್ಯ ನುಡಿದಿರುತ್ತಾರೆ ಎಂದು ನುಡಿಯುತ್ತಾರೆ.

ಪಾಟೀ ಸವಾಲಿಗೆ ಸಮಯ ಕೋರಿದ್ದು ಸಮಯ ನೀಡಲಾಯಿತು.

(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನವನ್ನು ಬೆರಳಚ್ಚು ಮಾಡಲಾಯಿತು)

ಓ.ಹೇ.ಕೇ.ಸ.ಓ

ಅಪರ ಸಿವಿಲ್ ನ್ಯಾಯಾಧೀಶರು
ಮತ್ತು ಜೆಎಂಎಫ್‌ಸಿ ಚನ್ನಪಟ್ಟಣ